Sri M. PALANIYAPPAN:—While observing this Prohibition Week, will Government consider the idea of shifting toddy shops outside the City limits and thereby indirectly, help the Prohibition Week ?

Sri T. CHANNIAH.—We will consider.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪಾನ ನಿರೋಧ ಜಾರಿಯಲ್ಲಿರುವ ಕಡೆ ಕಳ್ಳಬಟ್ಟಿ ಇಳಿಸುವುದು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪೋಲೀಸಿನವರೇ ಆ ಕೆಲಸ ಮಾಡುವುದು ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ಪಾನ ನಿರೋಧವನ್ನು ಜಾರಿಗೆ ತರಲು ಮಾನವರಿಗೆ ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯ. ನೀವೇನು ಹೇಳುತ್ತೀರಿ ?

(ಉತ್ತರವಿಲ್ಲ)

Health Centre in Devanahalli and Bangalore North Taluk.

Q.—217. Sri K. V. BYRE GOWDA (Bangalore North).—

Will the Government be pleased to state:—

whether they are starting Health Centres in Devanahalli and Bangalore North Taluks ?

A.—Sri T. CHANNIAH (Minister for Public Health and Local Self-Government).—

Proposals for the formation of Health Units in Bangalore North Taluk are under examination.

The question of starting Health Centres in Devanahalli Taluk will be taken up for examination in the order of priority in due course.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರಿನ ಬೆರ್ಪ್ ಏರಿಯಾ ಮತ್ತು ಸ್ಯಾಂಕಿ ರಸ್ತೆ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡ.—ಯಾವಾಗ ? ಪ್ರತಿ ವರ್ಷವೂ ಅಲ್ಲಿ ಮಲೇರಿಯಾ ರೋಗವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನು ಅರಿತೇ ಈಗ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಹೆಲ್ತ್ ಸೆಂಟರನ್ನು ಸ್ಥಾಪಿಸಬೇಕೆಂಬುದನ್ನು ಪರಿಶೀಲನೆ ಮಾಡುತ್ತಿರುವುದು.

Prohibition in Tiptur Taluk.

Q.—258. Sri T. G. THIMME GOWDA (Tiptur).—

Will the Government be pleased to state:—

(*a*) whether it is a fact that tapping has been permitted in Tiptur Taluk in more than one place ;

(*b*) whether prohibition is in force in Tiptur ;

(*c*) whether it has come to their notice that illicit sale of liquor is very much on the increase in Tiptur and surrounding areas, on account of the permission accorded to tap toddy in the area ;

(*d*) whether it is a fact that assurances have been given by the Government more than once to issue order for the discontinuance of this practice of tapping in prohibited areas ?

(*e*) whether Government propose to issue orders forthwith in this regard and prevent illicit sale and consumption of liquor ?

A.—Sri T. CHANNIAH (Minister for Public Health and Local Self-Government).—

(*a*) No.
(*b*) Yes.
(*c*) No.
(*d*) and (*e*) Yes.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕಿನಲ್ಲಿ ಮೂರು ನಾಲ್ಕು ಮೈಲಿ ಪ್ರದೇಶದಲ್ಲಿ ಹೆಂಡ ಮನ್ನಿಳಿಸುವುದಕ್ಕೆ ಅವಕಾಶಕೊಟ್ಟಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲವೆಂದು ಉತ್ತರ ಕೊಟ್ಟಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕು ಬಾರ್ಡರಿನಲ್ಲಿ ಹೆಂಡ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ, ಆ ತರಹ ಮಾರುತ್ತಿರುವುದು ಗೊತ್ತಾದರೆ ತಡೆಗಟ್ಟುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಕಳ್ಳತನದಲ್ಲಿ ಹೆಂಡ ಮಾರಾಟವಾಗುತ್ತಿರುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?